ಪೀಠಿಕೆ

# ವಿಶೇಷವಾದ ವ್ಯಕ್ತಿ

ನಾವೆಂದೂ ಭೆಟ್ಟಿಯಾಗಿರಲಿಕ್ಕಿಲ್ಲ, ಆದರೆ ನೀವು ವಿಶೇಷವಾದವರೆಂದು ನಾನು ಬಲ್ಲೆನು. ಯಾರೋ ಒಬ್ಬರು ಈ ಪಾಠಗಳನ್ನು ನಿಮ್ಮೊಂದಿಗೆ ಹಂಚಿ ಕೊಳ್ಳಲು ಯೋಚಿಸಿದ್ದರಿಂದ ಅದನ್ನು ನಾನು ತಿಳಿದು ಕೊಂಡಿದ್ದೇನೆ. ನಿಮಗೆ ಸಾಕಷ್ಟು ಆತ್ಮಿಕ ಆಸಕ್ತಿಯು ಇದ್ದದರಿಂದ ನೀವು ಈ ಪುಸ್ತಕವನ್ನು ಎತ್ತಿಕೊಂಡು ಓದುವದಕ್ಕೆ ಪ್ರಾರಂಭಿಸಿದ್ದರಲ್ಲಿ ನಾನು ಇದನ್ನು ಬಲ್ಲೆನು. ನಿಮಗೆ ಸಾಕಷ್ಟು ಆತ್ಮಿಕ ಆಸಕ್ತಿಯು ಇದ್ದುದರಿಂದ ನಾನು ಇದನ್ನು ಬಲ್ಲೆನು. ಇಲ್ಲಿ ಮತ್ತು ಈಗ ಎಂಬುದರಲ್ಲಿ ಮಾತ್ರವೇ ಆಸಕ್ತಿಯುಳ್ಳವರು ಹೆಚ್ಚಾಗಿ ಇರುವ ಲೋಕದಲ್ಲಿ, ಇದು ನಿಮ್ಮನ್ನು ಬಹಳ ವಿಶೇಷವಾದವರನ್ನಾಗಿ ಮಾಡುತ್ತದೆ.

"ಏನೇ ಆಗಲಿ, ಇದು ಯಾವುದರ ಬಗ್ಗೆ ಇದೆ?" ಎಂದು ನೀವು ಆಶ್ಚರ್ಯಪಡಬಹುದು. ಶಿರೋನಾಮವು "ರಕ್ಷಣೆಗೆ ಪ್ರತಿಯೊಬ್ಬರ ಮಾರ್ಗದರ್ಶಿ" ಎಂದಿದೆ; ಇದು ನಿತ್ಯ ರಕ್ಷಣೆಯ ವಿಷಯದ ಮೇಲಿನ ಗಂಭೀರವಾದ ಬೈಬಲ್ ಅಧ್ಯಯನವಾಗಿದೆ.

ಬಹುಶಃ ನೀವು ಶಾಲೆಯಲ್ಲಿ ವಾಚನ, ಗಣಿತ, ಇತಿಹಾಸ ಇತ್ಯಾದಿ ಅನೇಕ ವಿಷಯಗಳನ್ನು ಅಧ್ಯಯನ ಮಾಡಿರಬಹುದು. ಆದರೆ ರಕ್ಷಣೆಗಿಂತ ಹೆಚ್ಚು ಮುಖ್ಯವಾದ ವಿಷಯವನ್ನು ನೀವೆಂದೂ ಅಧ್ಯಯನ ಮಾಡಿರಲಿಕ್ಕಿಲ್ಲ. ದೇವರು ಇದ್ದರೆ (ಹಾಗೂ ಹೆಚ್ಚಾದ ಜನರು ದೇವರು ಇದ್ದಾರೆಂದು ನಂಬುವರು) ಮತ್ತು ಪರಲೋಕವು ಇದ್ದರೆ (ಮರಣಾನಂತರ ಜೀವಿತವಿರುವುದೆಂದು ಹೆಚ್ಚಾದ ಜನರು ನಂಬುತ್ತಾರೆ), ಈಗ ದೇವರನ್ನು ಮೆಚ್ಚಿಸುವುದು ಹೇಗೆ ಎಂಬುದನ್ನು ಹಾಗೂ ನಾವು ಮರಣ ಹೊಂದಿದ ಮೇಲೆ ಪರಲೋಕಕ್ಕೆ ಹೋಗುವುದು ಹೇಗೆ ಎಂಬುದನ್ನು ತಿಳಿಯುವುದು ಬಹಳ ಮಹತ್ವದ್ದಾಗಿರುವುದು.

ನಾವು ಕೇಂದ್ರೀಕರಿಸುವ ನಮ್ಮ ಅಧ್ಯಯನದ ಉದ್ದೇಶವನ್ನು ಈ ರೀತಿಯಲ್ಲಿ ಹೇಳುತ್ತೇನೆ:

**ಗುರಿ: ನಿತ್ಯಜೀವ**

ಪ್ರತಿಯೊಂದನ್ನು ಕುರಿತು ಬೈಬಲ್ ಹೇಳುವದೆಲ್ಲವನ್ನೂ ಅಧ್ಯಯನ ಮಾಡಲು ನಾವು ಶಕ್ತರಾಗುವದಿಲ್ಲ. ಕ್ರೈಸ್ತನಾಗುವುದು ಹೇಗೆ, ಈಗ ದೇವರನ್ನು ಮೆಚ್ಚಿಸುವುದು ಹೇಗೆ ಮತ್ತು ನಿತ್ಯವಾಗಿ ದೇವರೊಂದಿಗೆ ನೀವು ಜೀವಿಸುವಿರಿ ಎಂಬುದರ ಬಗ್ಗೆ ನಿಶ್ಚಿತತೆಯಿರುವುದು ಹೇಗೆ ಎಂಬುದರ ಮೇಲೆ ನಮ್ಮ ಅಧ್ಯಯನವು ಕೇಂದ್ರೀಕರಿಸುವುದು.

ಉತ್ತರಗಳನ್ನು ಕಂಡುಕೊಳ್ಳಲು ನಾವು ಬೈಬಲ್ ಉಪಯೋಗಿಸುತ್ತೇವೆ. ಯಾಕಂದರೆ ದೇವರನ್ನು ಮೆಚ್ಚಿಸುವುದು ಹೇಗೆ ಎಂಬುದನ್ನು ನಿಜವಾಗಿಯೂ ತಿಳಿಯಲು ಆತನ ಪುಸ್ತಕಕ್ಕೆ ಹೋಗುವುದೆ ಮಾರ್ಗವಾಗಿದೆ. ಧರ್ಮದ ಬಗ್ಗೆ ಸ್ವಂತ ಆಲೋಚನೆಗಳಿರುವಾಗ, ನಾನು ನೀನು ಯೋಚಿಸುವುದು ಮುಖ್ಯವಲ್ಲ,

ಆದರೆ ಬೈಬಲ್ ಹೇಳುವಂಥದ್ದು ಮಹತ್ವದ್ದಾಗಿದೆ.

ಇದು ಬೈಬಲ್ ಅಧ್ಯಯನವಾಗಿರುವದರಿಂದ ಅನೇಕ ಪರಿಶುದ್ಧ ಬರಹಗಳ ಕಡೆಗೆ ನಾವು ನೋಡಲಿಕ್ಕಿದ್ದೇವೆ. ಪರಿಸ್ಕರಿಸಿದ ನ್ಯೂ ಅಮೇರಿಕನ್ ಸ್ಟ್ಯಾಂಡರ್ಡ ಬೈಬಲನ್ನು ಉಪಯೋಗಿಸುತ್ತೇನೆ. ಕೆಲವು ವಚನಗಳನ್ನು ಉಲ್ಲೇಖಿಸುತ್ತೇನೆ, ಇತರವುಗಳನ್ನು ಕೇವಲ ನಮೂದಿಸುತ್ತೇನೆ. ನಿಮ್ಮ ಸ್ವಂತ ಬೈಬಲಿನಲ್ಲಿ ಇರುವ ಪ್ರತಿಯೊಂದು ವಾಕ್ಯವನ್ನು ಪರೀಕ್ಷಿಸಿರಿ. ನೀವು ಭಿನ್ನವಾದ ಅನುವಾದವನ್ನು[1] ಉಪಯೋಗಿ ಸುತ್ತಿದ್ದರೆ ಪದಗಳು ಸ್ವಲ್ಪ ಭಿನ್ನವಾಗಿರಬಹುದು; ಆದರೆ ನಿಮ್ಮಲ್ಲಿ ನಂಬಲ ರ್ಹವಾದ ಭಾಷಾಂತರದ ಬೈಬಲ್ ಇರುವವರೆಗೆ ಅವು ಮೂಲದಲ್ಲಿ ಒಂದೇ ಅರ್ಥ ಕೊಡುತ್ತವೆ. ನಾವು ಒಂದಾಗಿ ಅಧ್ಯಯನ ಮಾಡುವಾಗ, ಕಿಂಗ್ ಜೇಮ್ಸ್ ವರ್ಶನ್ (ಕೆಜೆವಿ), ದಿ ನ್ಯೂ ಇಂಟರ್‌ನ್ಯಾಶನಲ್ ವರ್ಶನ್ (ಎನ್‌ಐವಿ) ಹಾಗೂ ನ್ಯೂ ಅಮೇರಿಕನ್ ಸ್ಟ್ಯಾಂಡರ್ಡ ಬೈಬಲ್ (ಎನ್‌ಎಎಸ್‌ಬಿ) ಇಂಥ ಬಹಳವಾಗಿ ಉಪ ಯೋಗದಲ್ಲಿರುವ ಹಲವಾರು ಭಾಷಾಂತರಗಳನ್ನು ಉಪಯೋಗಿಸುವದನ್ನು ನೀವು ನೋಡುವಿರಿ.

ಬೈಬಲಿನ ಅಧ್ಯಯನವು ನಿಮಗೆ ಹೊಸದಾಗಿದ್ದರೆ, ಭಿನ್ನವಾದ ಪುಸ್ತಕಗಳನ್ನು ಕಂಡು ಹಿಡಿಯಲು ನಿಮ್ಮ ಬೈಬಲ್ ಪ್ರಾರಂಭದಲ್ಲಿರುವ ಅನುಕ್ರಮಣಿಕೆಯನ್ನು ಉಪ ಯೋಗಿಸಬಹುದು. "2 ಪೇತ್ರ 3:15, 16" ಎಂಬಂಥ ಉಲ್ಲೇಖ ನೀವು ನೋಡು ವಾಗ, "2 ಪೇತ್ರ" ಎಂಬುದು ಪುಸ್ತಕದ ಹೆಸರು, ವಿವರಣೆ ಚಿನ್ಹೆಯ ಮೊದಲಿನ ಸಂಖ್ಯೆ ಅಧ್ಯಾಯದ ಸಂಖ್ಯೆಯನ್ನು ಸೂಚಿಸುತ್ತದೆ. ಅದರ ನಂತರದ ಸಂಖ್ಯೆ (ಗಳು) ವಚನ (ಗಳನ್ನು) ಸೂಚಿಸುತ್ತದೆ. ವಚನ ಸಂಖ್ಯೆಯಲ್ಲಿ ಆಗಾಗ ಅಕ್ಷರಗಳು ಬರುವದನ್ನು ನೋಡುವಿರಿ; ಉದಾಹರಣೆ, "ವಚನ. 15ಬಿ, 16." ಇದರ ಅರ್ಥ ವಚನ 15ರ ಎರಡನೆಯ ಭಾಗದಿಂದ ವಚನ 16 ಪೂರ್ತಿಯಾಗಿ ಓದಿರಿ ಎಂದಾಗುತ್ತದೆ. (ವಚನಗಳು ಯಾವಾಗಲೂ ಪೂರ್ಣ ವಾಕ್ಯಗಳ ಪ್ರಕಾರ ವಿಭಾಗಿಸಲ್ಪಟ್ಟಿರುವದಿಲ್ಲ).

ನೀವು ವಾಕ್ಯವನ್ನು ಓದಿದನಂತರ ಅದರ ಮೊದಲಿನ ಮತ್ತು ನಂತರದ ವಚನಗಳನ್ನು ಓದಿರಿ. ವಚನಗಳನ್ನು ಪ್ರತ್ಯೇಕಿಸುವ ಸಾಧ್ಯತೆಯಿದೆ ಮತ್ತು ಅವು ಬೋಧಿಸದೇ ಇರುವಂಥದ್ದನ್ನು ಬೋಧಿಸುವಂತೆ ಕಾಣುತ್ತದೆ. ಅದು ಹಾಗಾಗ ಬೇಕೆಂದು ನಾವು ಬಯಸುವದಿಲ್ಲ. (2 ಪೇತ್ರ 3:15, 16 ಪರಿಶುದ್ಧ ಬರಹವನ್ನು ತಪ್ಪಾಗಿ ಅರ್ಥ ಮಾಡಿಕೊಳ್ಳುವದರ ಬಗ್ಗೆ ಹೇಳುತ್ತದೆ.)

ಇದನ್ನು ನಾನು ಅಚ್ಚಾದ ಭಾಷಣವೆಂದು ಯೋಚಿಸುವದಿಲ್ಲ: ಆದರೆ ವೈಯಕ್ತಿಕ ಅಧ್ಯಯನವೆಂದು ಯೋಚಿಸುತ್ತೇನೆ. ಬರಹವನ್ನು ಒಬ್ಬರೊಂದಿಗೊಬ್ಬರ ಅಧ್ಯಯ ನದಂತೆ ಉಪಯೋಗಿಸಿದ್ದೇನೆ. ಕೈಯಲ್ಲಿ ಪೆನ್ ಇಲ್ಲವೇ ಪೆನ್ಸಿಲಿನೊಂದಿಗೆ ಓದಿರಿ:

- ನೀವು ಏನನ್ನಾದರೂ ಓದುವಾಗ ಮಹತ್ವದ್ದೆಂದು ಕಂಡರೆ ಅದನ್ನು ಗುರುತಿಸಿರಿ.
- ಒಂದು ಆಲೋಚನೆಯನ್ನು ನೀವು ಒಪ್ಪಿಕೊಳ್ಳದಿರುವಾಗ, ಅದನ್ನು ಬರೆದಿಟ್ಟುಕೊಳ್ಳಿರಿ.
- ನಿಮಗೆ ಪ್ರಶ್ನೆಯಿದ್ದಾಗ, ಅದನ್ನು ಮಾರ್ಜಿನಿನಲ್ಲಿ ಬರೆಯಿರಿ.

ಒಂದು ಭಾಗವನ್ನು ನೀವು ಮುಗಿಸಿದಾಗ, ಈ ಪ್ರಕಟನೆಯನ್ನು (ಪುಸ್ತಕವನ್ನು) ನಿಮಗೆ ಕೊಟ್ಟ ಸ್ನೇಹಿತನನ್ನು ಸಂಪರ್ಕಿಸಿರಿ. (ಕವರಿನ ಮೇಲೆ ಅವನ[2] ಹೆಸರು

ಮತ್ತು ವಿಳಾಸವನ್ನು ಇಲ್ಲವೇ ದೂರವಾಣಿ ಸಂಖ್ಯೆಯನ್ನು ಬರೆಯಬಹುದು.) ನೀವು ಅವರೊಂದಿಗೆ ಇರುವಾಗ, ನಿಮ್ಮ ಟಿಪ್ಪಣಿಗಳನ್ನು ಅವರೊಂದಿಗೆ ಹಂಚಿಕೊಂಡು ನಿಮ್ಮ ಪ್ರಶ್ನೆಗಳನ್ನು ಕೇಳಿರಿ. ಪ್ರಶ್ನೆಗಳನ್ನು ಕೇಳುವದರಲ್ಲಿ ಹಿಂಜರಿಯ ಬೇಡಿರಿ. ಪ್ರಶ್ನೆಗಳು ನಿಮ್ಮನ್ನು ಮೂರ್ಖನಂತೆ ಕಾಣುವಂತೇ ಮಾಡುವದಿಲ್ಲ: ಪ್ರಶ್ನೆಗಳು ನೀವು ಯೋಚಿಸುತ್ತಿರುವಿರೆಂಬುದನ್ನು ತೋರಿಸುತ್ತವೆ.

ನಿಮಗೆ ಪ್ರಶ್ನೆಗಳಿರುವಾಗ ನೀವು ಹೆಚ್ಚು ಓದಬೇಕೆಂದು ಕೇಳಲ್ಪಡಬಹುದು. ಅನಂತರದ ಪಾಠದಲ್ಲಿ ನಿಮಗೆ ಉತ್ತರ ದೊರೆಯಬಹುದು. ಇಲ್ಲವೇ ಉತ್ತರವು ನಿಮಗೆ ಕೊಡಲ್ಪಟ್ಟಾಗ ಅದನ್ನು ಅರ್ಥ ಮಾಡಿ ಕೊಳ್ಳಲು ಹೆಚ್ಚಾದ ಹಿನ್ನೆಲೆಯು ನಿಮಗೆ ಅವಶ್ಯವಾಗಿರುವುದು. ನಿಮ್ಮ ಪ್ರಶ್ನೆಗಳು ಮುಖ್ಯವಾದವು. ಕ್ರಮೇಣವಾಗಿ ಪ್ರತಿಯೊಂದಕ್ಕೂ ಉತ್ತರವು ಕೊಡಲ್ಪಡುವದೆಂದು ಭರವಸೆಯುಳ್ಳವರಾಗಿರಿ.

ನಮ್ಮ ಅಧ್ಯಯನವನ್ನು ಪ್ರಾರಂಭಿಸುವ ಮೊದಲು ಈ ಕೆಳಗಿನ ಪ್ರಶ್ನಾವಳಿಯನ್ನು ಅಂದರೆ ಮಾಹಿತಿ ಪಟ್ಟಿಯನ್ನು ತುಂಬಿರಿ. ನಿಮ್ಮ ಸ್ನೇಹಿತರು ನಿಮ್ಮನ್ನು ಚೆನ್ನಾಗಿ ತಿಳಿದುಕೊಳ್ಳಲು ಇದು ಸಹಾಯ ಮಾಡುವುದು. ಅನಂತರದ ಪಾಠದಲ್ಲಿ ಈ ಫಾರ್ಮ್‌ನ್ನು ನಾವು ಉಪಯೋಗಿಸುವೆವು. ಯಾವ ಮಾಹಿತಿಯು ಅಪೇಕ್ಷಿಸಲ್ಪಟ್ಟಿದೆಯೆಂದು ನಿಮಗೆ ನಿಶ್ಚಿತತೆ ಇರದಿದ್ದರೆ ನಿಮಗೆ ಸಾಧ್ಯವಾದಷ್ಟನ್ನು ಮಾಡಿರಿ. ನೀವು ಬಯಸಿದರೆ ವಿವರಣೆಯ ಟಿಪ್ಪಣಿಗಳನ್ನು ಕೂಡಿಸಿರಿ. ಕೃತಜ್ಞತೆಗಳು!

ನಾವು ಅಧ್ಯಯನ ಮಾಡುವಂತೆ ನಮ್ಮೆಲ್ಲರನ್ನೂ ದೇವರು ಆಶೀರ್ವದಿಸಲಿ ಎಂದು ನಾನು ಪ್ರಾರ್ಥಿಸುವೆನು.

ಡೇವಿಡ್ ರೋಪರ್

ಹೆಸರು ______________________________

1. ನಾನು ಯಾವಾಗ ರಕ್ಷಿಸಲ್ಪಟ್ಟೆನು: ______________________
2. ಎಷ್ಟು ಸಮಯದನಂತರ, ನಾನು ರಕ್ಷಣೆ ಹೊಂದಿದನಂತರ, ನಾನು ಬಾಪ್ತಿಸ್ಮ ಹೊಂದುವ ಮೊದಲು: ______________________
3. ನಾನು ಬಾಪ್ತಿಸ್ಮ ಹೊಂದುವದಕ್ಕಿಂತ ಮೊದಲು ಮಾಡಿದ ಅರಿಕೆ:

   ______________________________
4. ನಾನು ಬಾಪ್ತಿಸ್ಮ ಹೊಂದಿದ ಕಾರಣ: ______________________
5. ನಾನು ಹೇಗೆ ಬಾಪ್ತಿಸ್ಮ ಹೊಂದಿದೆ (ಚಿಮುಕಿಸುವಿಕೆಯಿಂದ, ಮೇಲೆ ನೀರು ಹೊಯ್ಯಲ್ಪಟ್ಟದ್ದರಿಂದ, ಇಲ್ಲವೇ ಮುಳುಗಿಸಿ ಎಳಿಸುವಿಕೆಯಿಂದ):

   ______________________________

ಹೆಚ್ಚಿನ ಟಿಪ್ಪಣಿಗಳು - ಪ್ರಶ್ನೆಗಳು: ______________________

______________________________

______________________________

______________________________

ಟಿಪ್ಪಣಿಗಳು

[1]ಹಳೇ ಒಡಂಬಡಿಕೆಯ ಹೆಚ್ಚಾದ ಭಾಗವು ಮೂಲದಲ್ಲಿ ಹಿಬ್ರೂ ಭಾಷೆಯಲ್ಲಿ ಬರೆಯಲ್ಪಟ್ಟಿತು. ಹೊಸ ಒಡಂಬಡಿಕೆಯು ಮೂಲದಲ್ಲಿ ಕೊಯ್ನೆ ಗ್ರಿಕಿನಲ್ಲಿ ಬರೆಯಲ್ಪಟ್ಟಿತು. ("ಕೊಯ್ನೆ" ಅಂದರೆ "ಸಾಮಾನ್ಯ" ಎಂದರ್ಥ. ಹೊಸ ಒಡಂಬಡಿಕೆಯು ಬರೆಯಲ್ಪಡುತ್ತಿದ್ದ ಸಮಯದಲ್ಲಿ ಕೊಯ್ನೆ ಗ್ರೀಕ ಸಾಮಾನ್ಯ ಮನುಷ್ಯನು ಮಾತಾಡುವ ಗ್ರೀಕಾಗಿತ್ತು.) ಬೈಬಲು ಅನೇಕ ಭಾಷೆಗಳಲ್ಲಿ ಭಾಷಾಂತರಿಸಲ್ಪಟ್ಟಿದೆ. ಅನೇಕ ಜನರಲ್ಲಿ 1611ರ ಕಿಂಗ್ ಜೇಮ್ಸ್ ವರ್ಶನ್ ಎಂಬ ಇಂಗ್ಲೀಷ ಭಾಷಾಂತರವಿರುವುದು (ಇದು ಸಾಮಾನ್ಯ ಇಲ್ಲವೇ ಆಥರೈಜ್ಡ ವರ್ಶನ್ ಎಂದೂ ಕರೆಯಲ್ಪಡುತ್ತದೆ). ಇತರರು ಹೆಚ್ಚು ಪರಿಚಿತವಾದ ಶಬ್ದಗಳನ್ನು ಉಪಯೋಗಿಸಿದ ಇತ್ತೀಚಿಗಿನ ಭಾಷಾಂತರಗಳನ್ನು ಮೆಚ್ಚಿಕೊಳ್ಳುತ್ತಾರೆ. (ಈ ಪಾಠಗಳ ಅಂತ್ಯದಲ್ಲಿ ಇರುವ ಟಿಪ್ಪಣಿಗಳಿಗೆ ಎರಡು ಉದ್ದೇಶಗಳಿವೆ. (1) ಶಬ್ದಗಳನ್ನು ವಿವರಿಸುವುದು, ಹಾಗೂ (2) ಹೆಚ್ಚಿನ ಮಾಹಿತಿಯನ್ನು ಕೊಡುವುದು. ನೀವು ಓದಿದ್ದರ ಬಗ್ಗೆ ತೃಪ್ತರಾಗಿದ್ದರೆ ಅಂತಿಮ ಟಿಪ್ಪಣಿಗಳನ್ನು ಪರೀಕ್ಷಿಸುವ ಅವಶ್ಯಕತೆಯಿರುವದಿಲ್ಲ.) [2]ಈ ಪುಸ್ತಕವನ್ನು ನಿಮಗೆ ಕೊಟ್ಟವರು ಪುರುಷನೋ ಸ್ತ್ರೀಯೋ ಎಂಬುದು ನನಗೆ ಗೊತ್ತಿರುವದಿಲ್ಲ. ಈ ಸ್ನೇಹಿತನ ಬಗ್ಗೆ ಹೇಳುವಾಗ "ಅವನು ಇಲ್ಲವೇ ಅವಳು" ಎಂಬುದನ್ನು ಪುನಃ ಪುನಃ ಹೇಳದೇ ಸಾಮಾನ್ಯವಾಗಿ ಪುಲ್ಲಿಂಗ ಸರ್ವನಾಮವನ್ನು ಉಪಯೋಗಿಸುತ್ತೇನೆ. ಅಂದರೆ ಹೆಚ್ಚಾದ ಸಮಯದಲ್ಲಿ ಪುಲ್ಲಿಂಗವನ್ನೇ ಉಪಯೋಗಿಸುತ್ತೇನೆ. ಇದು ಸ್ತ್ರೀ ಪುರುಷರಿಬ್ಬರಿಗೂ ಅನ್ವಯಿಸುವುದು.

---

## ನೀವು ಕೇಳಬಹುದಾದ ಪ್ರಶ್ನೆಗಳು

### "ಅಪೊಸ್ತಲ ಪೌಲನು" ಯಾರು?

ಪೌಲನು ಮೂಲದಲ್ಲಿ "ಸೌಲ" ಎಂದು ತಿಳಯಲ್ಪಟ್ಟಿದ್ದನು. ಅವನು ಯೆಹೂದ್ಯನು, ಮೋಶೆಯ ಧರ್ಮಶಾಸ್ತ್ರದಲ್ಲಿ ಶ್ರದ್ಧೆಯುಳ್ಳವನು (ಫಿಲಿಪ್ಪಿ 3:5, 6). ಸಭೆಯು ಸ್ಥಾಪಿಸಲ್ಪಟ್ಟ ಮೇಲೆ ಅವನು ಕ್ರೈಸ್ತರನ್ನು ಹಿಂಸಿಸುವವನಾದನು (ಅಪೊಸ್ತಲರ ಕೃತ್ಯ 7:58; 8:1, 3; 9:1, 2). ಅವನು ಮಾರ್ಪಾಟು ಹೊಂದಿದ್ದು ಅಪೊಸ್ತಲರ ಕೃತ್ಯಗಳ ಮೂರು ಅಧ್ಯಾಯಗಳಲ್ಲಿ 9, 22 ಮತ್ತು 26ರಲ್ಲಿ ಕಂಡು ಬರುತ್ತದೆ. ಅನ್ಯರಿಗೆ ಇಲ್ಲವೇ ಯೆಹೂದ್ಯೇತರಿಗೆ ವಿಶೇಷ ಸೇವೆಯೊಂದಿಗೆ (ಅಪೊಸ್ತಲರ ಕೃತ್ಯ 9:15; ರೋಮಾಪುರ 11:13; 1 ತಿಮೊಥೆ 2:7) ಅಪೊಸ್ತಲನಾಗಿರಲು ಕ್ರಿಸ್ತನಿಂದ ನೇಮಿಸಲ್ಪಟ್ಟನು (ರೋಮಾಪುರ 1:1; 1 ಕೊರಿಂಥ 1:1). ಹೊಸ ಒಡಂಬಡಿಕೆಯಲ್ಲಿಯ ಅರ್ಧಕ್ಕಿಂತ ಹೆಚ್ಚು ಪುಸ್ತಕಗಳ ಗ್ರಂಥಕರ್ತನಾಗಿದ್ದಾನೆ (ರೋಮಾಪುರದವರಿಗೆ ಬರೆದ ಪತ್ರಿಕೆಯಿಂದ ಫಿಲೆಮೋನನಿಗೆ ಬರೆದ ಪತ್ರಿಕೆಯವರೆಗೆ ಮತ್ತು ಇಬ್ರಿಯರಿಗೆ ಬರೆದ ಪತ್ರಿಕೆಯೂ ಬಹುಶಃ ಒಳಗೊಂಡಿದೆ).

### ಪೌಲನು ಮತ್ತು ಇತರ ಪ್ರೇರಿತ ಬರಹಗಾರರು ಹೇಳಿದ್ದೂ ಬರೆದದ್ದೂ ಯಾವುದೇ ಭಿನ್ನತೆ ಮಾಡುತ್ತದೋ?

ಹೌದು, ಇಡೀ ಹೊಸ ಒಡಂಬಡಿಕೆಯು ಯೇಸುವಿನ ಹೊಸ ಒಡಂಬಡಿಕೆಯಾಗಿದೆ: ಕ್ರಿಸ್ತನು ವೈಯಕ್ತಿಕವಾಗಿ ಹೇಳಿದ್ದು ಮತ್ತು ಆತನು ಪ್ರೇರಿತ ಜನರ ಮೂಲಕವಾಗಿ ಹೇಳಿದ್ದು. ಯೇಸುವಿನ ಮರಣದ ಮೊದಲು ಆತನು ತನ್ನ ಅಪೊಸ್ತಲರಿಗೆ ತಾನು ಬೋಧಿಸಿದ ಎಲ್ಲವನ್ನೂ ಜ್ಞಾಪಿಸಿಕೊಳ್ಳಲು ಸಹಾಯ ಮಾಡುವದಕ್ಕೆ ಪವಿತ್ರಾತ್ಮನು ಕಳುಹಿಸಲ್ಪಡುವನು ಎಂದು ಹೇಳಿದ್ದನು (ಯೋಹಾನ 14:26; ನೋಡಿರಿ ಯೋಹಾನ 16:13). ಪೌಲನೂ ಇತರರೂ ತಾವು ಬೋಧಿಸಿದ್ದರಲ್ಲಿ ಪವಿತ್ರಾತ್ಮನಿಂದ ನಡಿಸಲ್ಪಟ್ಟರು

(1 ಕೊರಿಂಥ 2:12, 13 ನೋಡಿರಿ). ಮತ್ತಾಯ 10:40ರಲ್ಲಿ ಯೇಸು ಹೇಳಿದ್ದನ್ನು ಓದಿರಿ. ನೀವು ಅಪೊಸ್ತಲರ ಬೋಧನೆಯನ್ನು ತಿರಸ್ಕರಿಸಿದರೆ ನೀವು ಯೇಸುವನ್ನೇ ತಿರಸ್ಕರಿಸುವಿರಿ - ಹಾಗು ದೇವರನ್ನೇ ತಿರಸ್ಕರಿಸುವಿರಿ.

**"ಮಹಾ ನಿಯೋಗವು" ಯಾವುದು?**

ಯೇಸುವು ತನ್ನ ದಿವಾರೋಹಣಕ್ಕಿಂತ - ಮೊದಲು ತನ್ನ ಅನುಯಾಯಿಗಳಿಗೆ ಕೊಟ್ಟ ಅಂತಿಮ ಆದೇಶಗಳಿಗೆ ಸಾಮಾನ್ಯವಾಗಿ ಇದು ಸಂಬಂಧಿಸಿದೆ (ಮತ್ತಾಯ 28:18-20; ಮಾರ್ಕ 16:15, 16; ನೋಡಿರಿ ಲೂಕ 24:46, 47). "ಇಡೀ ಜಗತ್ತಿನಲ್ಲಿ" ಪ್ರತಿಯೊಂದು ಜನಾಂಗದ ಪ್ರತಿಯೊಬ್ಬ ವ್ಯಕ್ತಿಗೆ ಕ್ರಿಸ್ತನ ಸುವಾರ್ತೆಯನ್ನು ಸಾರುವುದು ಮಹಾ ನಿಯೋಗವಾಗಿದೆ.

© 2009 Truth for Today